8ನೇ ಅಕ್ಟೋಬರ್ 2015

**ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರೇ,**

**<u>ವಿಷಯ:</u>** ಸಿಎಜಿ ಯವರಿಂದ ಬಿಬಿಎಂಪಿ ಖಾತೆಗಳ ಆಡಿಟ್ ನಡೆಸಲು ಆದೇಶ ನೀಡುವಂತೆ ಕೋರಿ

ಬೆಂಗಳೂರು ನಗರ ಎದುರಿಸುತ್ತಿರುವ ಸಮಸ್ಯೆಗಳು ಮತ್ತು ನಿರ್ದಿಷ್ಟವಾಗಿ ಈ ಸಮಸ್ಯೆಗಳನ್ನು ಸೃಷ್ಟಿಸುತ್ತಿರುವ ವ್ಯಾಪಕ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ನಾನು ಈ ಹಿಂದೆ 16ನೇ ಡಿಸೆಂಬರ್ 2013 ಮತ್ತು 2ನೇ ಏಪ್ರಿಲ್ 2015ರಂದು ತಮಗೆ ಬರೆದ ಪತ್ರಗಳ ಮುಂದುವರಿಕೆಯಾಗಿ ಈ ಪತ್ರವನ್ನು ಬರೆಯುತ್ತಿದ್ದೇನೆ.

ಕೆಟ್ಟ ರಸ್ತೆಗಳು, ಅಸಮರ್ಪಕ ತ್ಯಾಜ್ಯ ನಿರ್ವಹಣೆಗಳೇ ಮುಂತಾದ ನಮ್ಮ ನಗರ ಇಂದು ಎದುರಿಸುತ್ತಿರುವ ಅನೇಕ ಸಮಸ್ಯೆಗಳಿಗೆ ಆರ್ಥಿಕ ಸಂಪನ್ಮೂಲಗಳ ಕೊರತೆಯ ಕಾರಣವನ್ನು ನೀಡಲಾಗುತ್ತಿದೆ. 2013ರ ಡಿಸೆಂಬರ್ ನಲ್ಲಿ ಬರೆದ ಪತ್ರದಲ್ಲಿ ಪ್ರಮುಖವಾಗಿ ನಗರದ ಆದಾಯ ಸಂಗ್ರಹಣೆ ಪ್ರಕ್ರಿಯೆಯಲ್ಲಿನ ಲೋಪದೋಷಗಳು ಮತ್ತು ಸೋರಿಕೆಗೆ ಒತ್ತು ನೀಡಿ ತಮ್ಮ ಗಮನವನ್ನು ಸೆಳೆದಿದ್ದೆ. ಈಗ ಮತ್ತೆ, ನಾಗರಿಕರಿಂದ ಸಂಗ್ರಹಿಸಲಾದ ತೆರಿಗೆ ಹಣವೂ ಸೇರಿದಂತೆ ನಗರದ ಅಭಿವೃದ್ಧಿಗಾಗಿ ಬಳಕೆಯಾಗಬೇಕಿದ್ದ ಕೋಟ್ಯಂತರ ರೂಪಾಯಿಗಳ ದುರ್ಬಳಕೆಗೆ ಅವಕಾಶ ನೀಡಿರುವ ಬಿಬಿಎಂಪಿಯ ಆರ್ಥಿಕ ನಿರ್ವಹಣೆಯಲ್ಲಿನ ವ್ಯಾಪಕ ಮತ್ತು ಉದ್ದೇಶಪೂರ್ವಕ ಲೋಪದೋಷಗಳನ್ನು ತಮ್ಮ ಗಮನಕ್ಕೆ ತರಲು ಈ ಪತ್ರವನ್ನು ಬರೆಯುತ್ತಿದ್ದೇನೆ.

ಬಿಬಿಎಂಪಿ ಸಂಗ್ರಹಿಸುತ್ತಿರುವ ನೂರಾರು ಕೋಟಿ ತೆರಿಗೆ ಹಣ ಮತ್ತು ಇನ್ನಿತರ ಆದಾಯಗಳನ್ನು ಮುಖ್ಯ ಬ್ಯಾಂಕ್ ಖಾತೆಗಳಲ್ಲಿ ಜಮಾ ಮಾಡದೆ, ಕೆಲ ಬಿಬಿಎಂಪಿ ಅಧಿಕಾರಿಗಳು ತೆರೆದಿರುವ ಇನ್ನಿತರ ಖಾತೆಗಳಲ್ಲಿಡಲಾಗುತ್ತಿದೆಯೆಂಬ ಸಂಗತಿಯನ್ನು ಹಲವಾರು ಸರ್ಕಾರೇತರ ಸಂಸ್ಥೆಗಳು ಮತ್ತು ಸಕ್ರಿಯ ನಾಗರಿಕರು ನನ್ನ ಗಮನಕ್ಕೆ ತಂದಿದ್ದಾರೆ. ಬಿಬಿಎಂಪಿ ಅಧಿಕಾರಿಗಳು ಸುಮಾರು 900 ಖಾತೆಗಳನ್ನು ನಿರ್ವಹಿಸುತ್ತಿರುವದಾಗಿ ತಿಳಿದುಬಂದಿದೆ. ನಗರದ ಒಂದು ಸಂಸ್ಥೆ ತನ್ನ ನಿರ್ವಹಣೆಗಾಗಿ ಇಷ್ಟು ಭಾರಿ ಸಂಖ್ಯೆಯಲ್ಲಿ ಬ್ಯಾಂಕ್ ಖಾತೆ ಹೊಂದಿರುವುದನ್ನೆ ಮೊದಲು ತನಿಖೆ ಮಾಡಬೇಕಿದ್ದು, ಸಾರ್ವಜನಿಕ ಮತ್ತು ಖಾಸಗಿ ವಲಯದ ಹಲವಾರು ಬ್ಯಾಂಕುಗಳಲ್ಲಿ ಇಷ್ಟೊಂದು ಖಾತೆಗಳನ್ನು ಯಾರು ತೆರೆದರು, ಯಾರು ನಿರ್ವಹಿಸುತ್ತಿದ್ದಾರೆ ಎಂಬುದನ್ನು ಕೂಲಂಕುಷವಾಗಿ ಪರಿಶೀಲಿಸಬೇಕಾಗಿದೆ. ನಂತರದಲ್ಲಿ ಈ ಖಾತೆಗಳನ್ನು 25 ಖಾತೆಗಳಲ್ಲಿ ಕ್ರೂಢೀಕರಿಸಲಾಯಿತೆಂದು ತಿಳಿದುಬಂದಿದೆಯಾದರೂ, ಹಿಂದೆ ಈ 900 ಖಾತೆಗಳನ್ನು ಯಾರು ಮತ್ತು ಹೇಗೆ ನಿರ್ವಹಿಸುತ್ತಿದ್ದರು ಎಂಬುದು ಉತ್ತರವಿಲ್ಲದ, ಪ್ರಶ್ನಿಸದ ವಿಷಯವಾಗಿಯೇ ಉಳಿದಿದೆ.

ಬಹುಸಂಖ್ಯೆಯಲ್ಲಿ ಖಾತೆಗಳನ್ನು ಹೊಂದಿರುವುದು ಮತ್ತು ರಾಷ್ಟ್ರೀಯ ಮುನ್ಸಿಪಲ್ ಲೆಕ್ಕಪರಿಶೋಧಕ ಕೈಪಿಡಿ ಅಥವಾ ಕರ್ನಾಟಕ ಮುನ್ಸಿಪಲ್ ಲೆಕ್ಕಪರಿಶೋಧಕ ಹಾಗು ಬಜೆಟ್ ನಿಯಮಗಳು ಮುಂತಾದ ಲೆಕ್ಕಗಾರಿಕೆಯ ಮಾನದಂಡಗಳನು

ಅಳವಡಿಸಿಕೊಳ್ಳುವಲ್ಲಿನ ವೈಫಲ್ಯಗಳು, ಬಿಬಿಎಂಪಿಯ ಕೆಲ ನಿರ್ಲಜ್ಜ ಅಧಿಕಾರಿಗಳು ತಮ್ಮ ಕೈಚಳಕ ಮತ್ತು ಕುಶಲತೆಗಳಿಂದ ಸಂಸ್ಥೆಯ ಆದಾಯವನ್ನು ದುರ್ಬಳಕೆ ಮಾಡಿಕೊಂಡಿರುವುದನ್ನು ಸ್ಪಷ್ಟವಾಗಿ ಎತ್ತಿತೋರಿಸುತ್ತಿದೆ.

ಕೆಲವು ಅಧಿಕಾರಿಗಳು ತಮ್ಮ ವೈಯಕ್ತಿಕ ಲಾಭಕಾಗಿ, ಸಂಗ್ರಹಿತ ತೆರಿಗೆ ಹಣವನ್ನು, ಅಕ್ರಮವಾಗಿ ಖಾಸಗಿ ಬ್ಯಾಂಕುಗಳಲ್ಲಿ ಮತ್ತು ಕೆಲ ಸಂದರ್ಭಗಳಲ್ಲಿ ಬೆಂಗಳೂರಿನ ಹೊರಗಿರುವ ಬ್ಯಾಂಕುಗಳಲ್ಲಿ ಕೂಡ ಠೇವಣಿಯಿಟ್ಟಂತಹ ಪ್ರಕರಣಗಳು ವರದಿಯಾಗಿವೆ. ಅದು ಬಿಡಿಎ, ಬಿಬಿಎಂಪಿ, ಆರ್.ಡಿ.ಪಿ.ಆರ್ ಅಥವಾ ಇನ್ನ್ಯಾವುದೇ ಸರ್ಕಾರಿ ಇಲಾಖೆಯಾಗಲಿ, ಕೆಲ ಭ್ರಷ್ಟ ಅಧಿಕಾರಿಗಳು ಸಾರ್ವಜನಿಕ ಹಣವನ್ನು ಅಕ್ರಮವಾಗಿ ಜಮಾಮಾಡುವ ಸಂಸ್ಕೃತಿ ಹಾಸುಹೊಕ್ಕಾಗಿರುವಂತೆ ತೋರುತ್ತಿದ್ದು, ಆ ಮೂಲಕ, ಸರ್ಕಾರಿ ಖಜಾನೆಗೆ ನ್ಯಾಯವಾಗಿ ಲಭ್ಯವಾಗಬೇಕಿದ್ದ ಜಮಾಮೊತ್ತದ ಮೇಲಿನ ಬಡ್ಡಿ ಮತ್ತು ನಗರದ ಅಭಿವೃದ್ಧಿಗೆ ಲಭ್ಯವಿರಬೇಕಿದ್ದ ಹಣದಿಂದ ವಂಚಿಸಲಾಗುತ್ತಿದೆ. ಇದು ಅತೀವ ಕಳವಳಕಾರಿ ವಿಷಯವಾಗಿದ್ದು ರಾಜ್ಯದ ಹಣಕಾಸು ಸಚಿವರೂ ಆಗಿರುವ ತಮ್ಮಿಂದ ಕೂಡಲೇ ಅಗತ್ಯ ಕ್ರಮಗಳನ್ನು ನಿರೀಕ್ಷಿಸಲಾಗುತ್ತಿದೆ.

ಬಿಬಿಎಂಪಿ ಹಣಕಾಸು ವ್ಯವಹಾರಗಳ ಆಡಿಟ್ ನಡೆಸದೇ ವರ್ಷಗಳೇ ಕಳೆದಿವೆ. ಕಡೆಯ ಆಂತರಿಕೆ ಆಡಿಟ್ ನಡೆದದ್ದು 2011ರಲ್ಲಿ ಎಂಬುದೇ ಅತ್ಯಂತ ಆಘಾತಕಾರಿ ಸಂಗತಿಯಾಗಿದೆ. ನಿಮಗೆ ತಿಳಿದೇ ಇರುವಂತೆ, ಭಾರತೀಯ ಮಹಾಲೇಖಪಾಲರು (ಸಿಎಜಿ) ಬಿಬಿಎಂಪಿಯ ಕಡೆಯ ಆಡಿಟ್ ನಡೆಸಿದ್ದು 2009-10ರಲ್ಲಿ ಮತ್ತು ಆ ಸಂದರ್ಭದಲ್ಲಿ ಆಶ್ಚರ್ಯಕರವಲ್ಲವೆಂಬಂತೆ ದೊಡ್ಡ ಪ್ರಮಾಣದ ಆರ್ಥಿಕ ಅಕ್ರಮಗಳು ಬಯಲಾಗಿತ್ತು. 14/7/2014ರಂದು ಶಾಸನಸಭೆಯಲ್ಲಿ ಮಂಡಿಸಲಾದ 2014ರ ವರದಿ ಸಂ. 5ರಲ್ಲಿ, ಬಿಬಿಎಂಪಿಯ ಹಣಕಾಸು ನಿರ್ವಹಣೆ ಮತ್ತು ಪ್ರಕ್ರಿಯೆಗಳ ಕುರಿತು ಸಿಎಜಿ ಗಂಭೀರ ಸವಾಲುಗಳನ್ನೆತ್ತಿದ್ದರು. 2008-13ರಲ್ಲಿ ಚಾರ್ಟೆಡ್ ಅಕೌಂಟೆಂಟ್ ಗಳಿಂದ ಖಾತೆಗಳ ಪ್ರಮಾಣಿಕರಿಸುವಲ್ಲಿನ ಕೊರತೆಯನ್ನು ಸಿಎಜಿ ವರದಿ ಎತ್ತಿತೋರಿಸಿದೆ. ಪಾಲಿಕೆಯ ವಾರ್ಷಿಕ ಖಾತಾ ನಿರ್ವಹಣೆಯಲ್ಲಿನ ನ್ಯೂನತೆಗಳು ಮತ್ತು ಲೋಪಗಳನ್ನು ವರದಿಯ 3.1, 3.17, 4.5 ಮತ್ತು 4.6 ಸೇರಿದಂತೆ ಅನೇಕ ಅಂಕಗಳಲ್ಲಿ ಉಲ್ಲೇಖಿಸಲಾಗಿದೆ.

ಉತ್ತಮ ಆಡಳಿತ ನಡೆಸಲು ಆರ್ಥಿಕ ಮತ್ತು ಲೆಕ್ಕಪತ್ರದ ವಿಷಯಗಳಲ್ಲಿ ಪಾರದರ್ಶಕತೆ ಮತ್ತು ಪ್ರಾಮಾಣಿಕತೆ ಅತ್ಯಂತ ಮಹತ್ವದ ಅಂಶಗಳಾಗಿವೆ ಎಂಬುದನ್ನು ಮುಖ್ಯಮಂತ್ರಿಗಳಾಗಿ ಮತ್ತು ಹಣಕಾಸು ಸಚಿವರಾಗಿ ತಾವು ಖಂಡಿತ ಒಪ್ಪುತ್ತೀರಿ. ಬಿಬಿಎಂಪಿ ಮತ್ತು ಇನ್ನಿತರ ಸಂಸ್ಥೆಗಳ ಹಣಕಾಸು ಮತ್ತು ಲೆಕ್ಕಪತ್ರ ವ್ಯವಹಾರಗಳಲ್ಲಿ ದುರಾಚಾರದ ಪ್ರಬಲ ಸಂಶಯಗಳು ವ್ಯಕ್ತವಾಗುತ್ತಿದೆ. ಆದ್ದರಿಂದ, ತಪ್ಪಿತಸ್ಥರನ್ನು ಶಿಕ್ಷಿಸಿ, ಸಾರ್ವಜನಿಕರಿಗೆ ಸೇರಬೇಕಾದ ಮೊತ್ತವನ್ನು ಮರಳಿ ಪಡೆಯಲು ವಿಶೇಷ ಆಡಿಟ್ ನಡೆಸುವುದು ತಕ್ಷಣದ ಅಗತ್ಯವಾಗಿದೆ.

ಬಿಬಿಎಂಪಿ ಮತ್ತು ಇನ್ನಿತರ ಸಂಸ್ಥೆಗಳು ಸಂಗ್ರಹಿಸಿದ ಸಂಪನ್ಮೂಲಗಳು ಸಾರ್ವಜನಿಕರ ನಿಧಿಯಾಗಿದ್ದು, ಯಾವುದೇ ರೀತಿಯಲ್ಲಿ ಅದರ ದುರ್ಬಳಕೆಯು ಕೂಡ ಭ್ರಷ್ಟಾಚಾರ ಎನ್ನಿಸಿಕೊಳ್ಳುತ್ತದೆ ಮತ್ತು ಇದು ಭ್ರಷ್ಟಾಚಾರ ತಡೆ ಕಾನೂನು ಸೇರಿದಂತೆ ಕಾನೂನಿನ ವಿವಿಧ ಪರಿಚ್ಛೇದಗಳನ್ವಯ ಶಿಕ್ಷಾರ್ಹ ಅಪರಾಧವಾಗಿದೆ.

ಆದಾಯ ಸೋರಿಕೆ ಮತ್ತು ದುರ್ಬಳಕೆಯಾಗಿರುವುದಕ್ಕೆ ಸಾಕಷ್ಟು ಪುರಾವೆಗಳಿವೆ. ತಾವು ಮಧ್ಯಪ್ರವೇಶಿಸಿ ಬೆಂಗಳೂರಿನ ಹದಗೆಟ್ಟ ಪರಿಸ್ಥಿತಿಯನ್ನು ತಿಳಿಗೊಳಿಸಲು ಕೋರಿ ನಾನು ಪದೇಪದೇ ತಮ್ಮನ್ನು ಒತ್ತಾಯಿಸುತ್ತಲೇ ಬಂದಿದ್ದರೂ ಈವರೆಗೂ ತಾವು ಯಾವ ಕ್ರಮವನ್ನು ತೆಗೆದುಕೊಂಡಿಲ್ಲ. ಬೆಂಗಳೂರನ್ನು ಪ್ರತಿನಿಧಿಸುವ ಒಬ್ಬ ಸಂಸತ್ ಸದಸ್ಯನಾಗಿ, ನಾನು ತಮಗೆ ಮತ್ತು ತಮ್ಮ ಸರ್ಕಾರಕ್ಕೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವಂತೆ ಮತ್ತು ಬಿಬಿಎಂಪಿ ಹಣಕಾಸುಗಳ ಬಗ್ಗೆ, ಅದರಲ್ಲೂ ವಿಶೇಷವಾಗಿ 2010ರ ನಂತರದ ನೀಡಲಾದ ರಶೀದಿ ಮತ್ತು ವಾಸ್ತವ ಆದಾಯ ರಶೀದಿಗಳ ಹೊಂದಾಣಿಕೆಗಳ ಬಗ್ಗೆ ತಕ್ಷಣವೇ ಸಿಎಜಿ ಆಡಿಟ್ ಗೆ ಆದೇಶಿಸಬೇಕೆಂದು ಈಮೂಲಕ ಒತ್ತಾಯಿಸುತ್ತಿದ್ದೇನೆ. ಇಲ್ಲದಿದ್ದಲ್ಲಿ ಈ ವಿಷಯದ ಬಗ್ಗೆ ನಾನು ನ್ಯಾಯಾಂಗದ ಮೊರೆಹೋಗುವುದು ಅನಿವಾರ್ಯವಾಗುತ್ತದೆ.

ಈ ಕುರಿತು ತಮ್ಮ ತಕ್ಷಣದ ಸಕಾರಾತ್ಮಕ ಪ್ರತಿಕ್ರಿಯೆಗಳನ್ನು ನಿರೀಕ್ಷಿಸುತ್ತಿದ್ದೇನೆ.

ತಮ್ಮ ವಿಶ್ವಾಸಿ,

**ರಾಜೀವ್ ಚಂದ್ರಶೇಖರ್**

**ಶ್ರೀ ಸಿದ್ಧರಾಮಯ್ಯನವರು**
ಸನ್ಮಾನ್ಯ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ
ವಿಧಾನಸೌಧ, ಬೆಂಗಳೂರು

ಪ್ರತಿಯನ್ನು:- ಶ್ರೀ ರಾಮಲಿಂಗಾರೆಡ್ಡಿ, ಸನ್ಮಾನ್ಯ ಸಾರಿಗೆ ಸಚಿವರು ಮತ್ತು ಬೆಂಗಳೂರು ಜಿಲ್ಲಾ ಉಸ್ತುವಾರಿ ಸಚಿವರು, ವಿಧಾನಸೌಧ, ಬೆಂಗಳೂರು